**ಓ.ಎಸ್. ನಂ. 93/2020** **ಡಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 19.7.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ ವಾದಿ ಪರ ಶ್ರೀ ವಿ.ಎಸ್ ವಕೀಲರಿಂದಃ</u>

ನಾನು ಮತ್ತು 1 ಹಾಗೂ 3 ನೇ ಪ್ರತಿವಾದಿಯರು ಕಳೆದ 30 ವರ್ಷಗಳಿಂದ ಶಿರಮಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತೇವೆ ಎಂದರೆ ಸರಿ. ನನ್ನ ತಂದೆ 4 ನೇ ಪ್ರತಿವಾದಿಯ ಜೊತೆ ಪ್ರತ್ಯೇಕವಾಗಿ ಶಿಂಡೇನಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ನಾನು ಮತ್ತು 3 ನೇ ಪ್ರತಿವಾದಿಯ ಶಿಕ್ಷಣ ಶಿರಮಳ್ಳಿ ಗ್ರಾಮದಲ್ಲಿ ಆಗಿರುತ್ತದೆ ಎಂದರೆ ಸರಿ. ನನ್ನ ತಂಗಿ 3 ನೇ ಪ್ರತಿವಾದಿ ವಿದ್ಯಾಭ್ಯಾಸ ಮಾಡಿರುವುದಿಲ್ಲ. ಅವರು ಆಂಗ್ಲಭಾಷೆಯಲ್ಲಿ ಸಹಿ ಮಾಡುತ್ತಾರೆ ಎಂದರೆ ಸಾಕ್ಷಿದಾರರು ಕಲಿತುಕೊಂಡು ಮಾಡುತ್ತಾರೆ ಎನ್ನುವರು. ನನ್ನ ತಂದೆ ನನ್ನನ್ನು ಹಾಗೂ 1 ಮತ್ತು 3 ನೇ ಪ್ರತಿವಾದಿಯನ್ನು ನೋಡಿಕೊಳ್ಳುತ್ತಿಲ್ಲ ಎಂದು ಅವರ ಆಸ್ತಿಯಲ್ಲಿ ಭಾಗ ಬರಬೇಕು ಎಂದು ದಾವೆ ಹಾಕಿರುತ್ತೇವೆ ಎಂದರೆ ಸರಿ. ಕಲ್ಕೋಡು ಗ್ರಾಮದ ಸರ್ವೆ ನಂ.5/14 ರ 4-20 ಎಕರೆ ಜಮೀನು ನನ್ನ ತಾತ ಈರೇಗೌಡರಿಗೆ ದರಕಾಸ್ತು ಮೂಲಕ ಮಂಜೂರಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ 4-20 ಎಕರೆ ಪೈಕಿ 1-20 ಎಕರೆ ನಂದಿನಿ ಎಂಬುವವರಿಗೆ ಮಾರಾಟವಾಗಿರುತ್ತದೆ ಎಂದರೆ ಸರಿ. ನಾನು ದಾಖಲಿಸಿರುವ ಓ.ಎಸ್ 30/2010 ರಲ್ಲಿ ಮೇಲೆ ಹೇಳಿದ 4-20 ಎಕರೆ ಪೈಕಿ 1-20 ಎಕರೆ ನನ್ನ, 1 ಮತ್ತು 3 ನೇ ಪ್ರತಿವಾದಿಯರಿಗೆ ಹಾಗೂ 1-20 ಎಕರೆ 4 ರಿಂದ 6 ನೇ ಪ್ರತಿವಾದಿಯರಿಗೆ ಕೊಡಬೇಕೆಂದು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸಾಕ್ಷಿದಾರರು ನಮಗೆ 1-20 ಎಕರೆ ಬರಬೇಕೆಂದು ರಾಜಿಯಾಗಿರುತ್ತದೆ, 4 ರಿಂದ 6 ನೇ ಪ್ರತಿವಾದಿಯರಿಗೆ ಆಗಿರುವ ಬಗ್ಗೆ ಗೊತ್ತಿರುವುದಿಲ್ಲ ಎನ್ನುವರು. ಓ.ಎಸ್ 30/2010 ರಲ್ಲಿ ಆದೇಶವಾದ ನಂತರವೂ ಸಹ ನಮ್ಮ ಪರವಾಗಿ ನಮ್ಮ ತಂದೆಯೇ ಜಮೀನನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ಮದುವೆ 2010 ರಲ್ಲಿ ಆಗಿರುತ್ತದೆ. 3 ನೇ ಪ್ರತಿವಾದಿಯ ಮದುವೆಯಾಗಿ 7-8 ವರ್ಷವಾಗಿರುತ್ತದೆ. ನನ್ನ ಹಾಗೂ ನನ್ನ ತಂಗಿಯ ಮದುವೆಗೆ ಮಾಡಿದ ಸಾಲವನ್ನು ತೀರಿಸಲು ನಮ್ಮ ಪಾಲಿಗೆ ಬಂದ 1-20 ಎಕರೆ ಜಮೀನನ್ನು ಹಾಗೂ 4 ರಿಂದ 6 ನೇ ಪ್ರತಿವಾದಿಯರ ಪಾಲಿಗೆ ಬಂದಿದ್ದ 1-20 ಎಕರೆ ಪೈಕಿ 30 ಗುಂಟೆ ಜಮೀನನ್ನು ಮಾರಾಟ ಮಾಡಲು ನಮ್ಮ ಕುಟುಂಬದಲ್ಲಿ ತೀರ್ಮಾನ ಮಾಡಲಾಗಿತ್ತು ಎಂದರೆ ಸರಿಯಲ್ಲ. ಓ.ಎಸ್ 30/2010 ರ ಆದೇಶದ ಪ್ರಕಾರ 2013 ರಲ್ಲಿ ನನ್ನ ಹಾಗೂ 3 ನೇ ಪ್ರತಿವಾದಿಯ ಹೆಸರಿಗೆ ಖಾತೆಯಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರಿದು ನನ್ನ ತಂದೆ ಹೆಸರಿಗೆ ಆಗಿತ್ತು ಎನ್ನುವರು. ನಾನು ಈ ಕೇಸಿನಲ್ಲಿ ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ನಾನು ಹಾಜರುಪಡಿಸಿರುವ ದಾಖಲಾತಿಗಳ ಪ್ರಕಾರ 1-20 ಎಕರೆ ಖಾತೆಯು ದಿನಾಂಕ 27.12.2013 ರಂದು ಆಗಿರುತ್ತದೆ ಎಂದರೆ ಸರಿಯಲ್ಲ. ನಾನು, ನನ್ನ ತಂಗಿ, ನನ್ನ ತಂದೆ ತಾಯಿ ಸೇರಿ ಎಕರೆಗೆ 4.85 ಲಕ್ಷದಂತೆ ಆಸ್ತಿಯನ್ನು ಮಾರಾಟ ಮಾಡುತ್ತೇವೆ ಎಂದು ವಾದಿಯರ ಜೊತೆ ಒಪ್ಪಂದ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಭಾಗಕ್ಕೆ ಒಟ್ಟು 7,27,500/- ಗಳನ್ನು ನೀಡಿ ಖರೀದಿ ಮಾಡುತ್ತೇವೆ ಎಂದು ವಾದಿ ಒಪ್ಪಿದ್ದರು ಎಂದರೆ ಸರಿಯಲ್ಲ. 4 ರಿಂದ 6 ನೇ ಪ್ರತಿವಾದಿಯರ ಭಾಗಕ್ಕೆ

ಸಂಬಂಧಿಸಿದ ಆಸ್ತಿಗೆ 3,63,750/- ಗಳಿಗೆ ಖರೀದಿ ಮಾಡುತ್ತೇವೆ ಎಂದು ವಾದಿ ಒಪ್ಪಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು, 1, 3, 4 ರಿಂದ 6 ನೇ ಪ್ರತಿವಾದಿಯರು ಮತ್ತು ನನ್ನ ತಂದೆ ಸೇರಿ ದಿನಾಂಕ 6.1.2014 ರಂದು ನೋಂದಾಯಿತ ಕರಾರುಪತ್ರವನ್ನು ವಾದಿಗೆ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಈಗ ನೋಡುತ್ತಿರುವ ನಿಪಿ1 ರಲ್ಲಿರುವ ಭಾವಚಿತ್ರವು ನನ್ನ ತಂದೆಯ ಭಾವಚಿತ್ರ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ಈಗ ನೋಡುತ್ತಿರುವ ನಿಪಿ1 ರಲ್ಲಿರುವ ಭಾವಚಿತ್ರ ನನ್ನ ತಾಯಿಯ ಭಾವಚಿತ್ರ ಎಂದರೆ ಸರಿ. ಅದೇ ರೀತಿ ಈಗ ನೋಡುತ್ತಿರುವ ನಿಪಿ1 ರಲ್ಲಿ ನನ್ನ ಭಾವಚಿತ್ರ ಇರುತ್ತದೆ ಎಂದರೆ ಸರಿಯಾಗಿ ಕಾಣಿಸುತ್ತಿಲ್ಲ ಎನ್ನುವರು. ಅದೇ ರೀತಿ ಈಗ ನೋಡುತ್ತಿರುವ ನಿಪಿ1 ರಲ್ಲಿ ನನ್ನ ತಂಗಿಯ ಭಾವಚಿತ್ರ ಇರುತ್ತದೆ ಎಂದರೆ ಸರಿಯಾಗಿ ಕಾಣಿಸುತ್ತಿಲ್ಲ ಎನ್ನುವರು. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಕರಾರು ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದು ಹೇಳಿರುವುದಿಲ್ಲ. ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದಾಗಿರುವುದಿಲ್ಲ. ಸಾಕ್ಷಿದಾರರಿಗೆ ಅವರ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ತೋರಿಸಲಾಗಿರುತ್ತದೆ. ಈಗ ನೋಡುತ್ತಿರುವ ನಿಪಿ1 ರಲ್ಲಿರುವ ಸಹಿ ನನ್ನದಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ1 ದಾಖಲೆಗೆ ನಾನು ಹಾಗೂ ಇತರರು ಸೇರಿ ಸಹಿ ಮಾಡಿ ನೋಂದಣಿ ಮಾಡಿಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿಪಿ1 ಕರಾರುಪತ್ರವಾದ ದಿನ ನಮ್ಮ ಭಾಗಕ್ಕೆ 4,22,500/- ರೂಪಾಯಿಯನ್ನು ಮುಂಗಡವಾಗಿ ನಾನು, 1 ಹಾಗೂ 3 ನೇ ಪ್ರತಿವಾದಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ತಂದೆ ಹಾಗೂ 4 ರಿಂದ 6 ನೇ ಪ್ರತಿವಾದಿಯರ ಭಾಗಕ್ಕೆ ಸಂಬಂಧಿಸಿದ 2.5 ಲಕ್ಷ ಹಣವನ್ನು ಮುಂಗಡವಾಗಿ ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಕಲ್ಕೋಡು ಗ್ರಾಮದ ಸರ್ವೆ ನಂ.5 ರಲ್ಲಿ ಒಟ್ಟು 600 ಎಕರೆಗಿಂತ ಜಾಸ್ತಿ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂ.5 ರಲ್ಲಿ ಜಮೀನನ್ನು ಬ್ಲಾಕ್ ಮಾಡಿ ಸರ್ಕಾರದವರು ಹಂಚಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.5 ರ ಜಮೀನು ಪಕ್ಕಾ ಪೋಡಿ ಜಮೀನಾಗಿರುವುದಿಲ್ಲ ಎಂದರೆ ಸಾಕ್ಷಿದಾರರು ದುರಸ್ತಿಯಾಗಿರುತ್ತದೆ ಎನ್ನುವರು. ಆ ರೀತಿ ದುರಸ್ತಿಯಾಗಿರುವ ಬಗ್ಗೆ ದಾಖಲೆ ನನ್ನ ಬಳಿ ಇರುತ್ತದೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. 2014 ರಲ್ಲಿ ದಾವಆಸ್ತಿಯು ಪಕ್ಕಾ ಪೋಡಿಯಾಗಿ ದುರಸ್ತಿಯಾಗಿರಲಿಲ್ಲ ಎಂದರೆ ಸರಿಯಲ್ಲ. ವಾದಿಯು ಸರ್ವೆ ನಂ.5/14 ರ ಒಂದು ಭಾಗವನ್ನು ಖರೀದಿ ಮಾಡಿದ್ದರಿಂದ ನಾವು ಸರ್ವೆ ನಕಾಶೆಯನ್ನು 3 ತಿಂಗಳ ಒಳಗಾಗಿ ಮಾಡಿಸಿಕೊಡಬೇಕೆಂದು ಒಪ್ಪಿಕೊಂಡಿದ್ದೆವು ಎಂದರೆ ಸರಿಯಲ್ಲ. ನಾವು ನಕಾಶೆಯನ್ನು ಕೊಟ್ಟ 3 ತಿಂಗಳ ಒಳಗೆ ವಾದಿಯು ಕ್ರಯಪತ್ರವನ್ನು ನೋಂದಾಯಿಸಿಕೊಳ್ಳಬೇಕು ಎಂದು ಕರಾರುಪತ್ರದಲ್ಲಿ ಷರತ್ತನ್ನು ನಮೂದಿಸಲಾಗಿತ್ತು ಎಂದರೆ ಸರಿಯಲ್ಲ. ವಾದಿಯು ಈ ಕೇಸಿನಲ್ಲಿ ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ತಿಳಿದುಕೊಂಡಿರುವುದಿಲ್ಲ. ಸರ್ವೆ ನಕಾಶೆಯನ್ನು ನಾವೇ ಮಾಡಿಸಿಕೊಡುತ್ತೇವೆ ಎಂದು ನನ್ನ ತಂದೆ ಮತ್ತು ಅವರ ಮಗ ಗವಿ ಎಂಬುವವರು ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು, 1 ಮತ್ತು 3 ನೇ ಪ್ರತಿವಾದಿಯರು ಅನ್ಯೋನ್ಯವಾಗಿದ್ದೇವೆ ಎಂದರೆ ಸರಿ. 1 ಮತ್ತು 3 ನೇ ಪ್ರತಿವಾದಿಯರು ನನ್ನ ಜೊತೆ ತಕರಾರನ್ನು ಹಾಕಿರುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.